268 3.

ಸಂ.ಭೂಸಿಎ. 135:93-96

ವಿಭಾಗಾಧಿಕಾರಿಗಳವರ ಕಛೇರಿ,
ಮೈಸೂರು ವಿಭಾಗ,
ಮೈಸೂರು ದಿನಾಂಕ 24-11-95.

## ಸುತ್ತೋಲೆ

ವಿಷಯ: ಭೂ ಸ್ವಾಧೀನ ಪ್ರಕರಣಗಳ ಪೋಡಿ ಕೆಲಸವನ್ನು ತ್ವರಿತವಾಗಿ ನಿರ್ವಹಿಸುವ ಬಗ್ಗೆ-

-೦೦-

ನೀರಾವರಿ ಯೋಜನೆ ಮತ್ತು ಇನ್ನಿತರ ಸಾರ್ವಜನಿಕ ಉದ್ದೇಶಗಳಿಗಾಗಿ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪೋಡಿ ಕಾರ್ಯ ಹಲವಾರು ಪ್ರಕರಣಗಳಲ್ಲಿ ಬಾಕಿ ಇರುವುದು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ ಹಾಗೂ ಇನ್ನಿತರ ಅಧೀನ ಕಛೇರಿಗಳ ತಪಾಸಣೆಯಿಂದ ಕಂಡುಬಂದಿರುತ್ತದೆ. ಈ ಕಾರ್ಯ ನಿರ್ವಹಣೆಗೆ ಸಂಬಂಧಪಟ್ಟ ಅಧಿಕಾರಿಗಳು ಲಕ್ಷ್ಯ ಗಮನ ಹರಿಸದೆ ಅಲಕ್ಷಿಸಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ವಿವಿಧ ಉದ್ದೇಶಗಳಿಗಾಗಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ಪೋಡಿ ಕೆಲಸ ನಿರ್ವಹಣೆ ಬಗ್ಗೆ ಈ ಕೆಳಕಂಡಂತೆ ಕ್ರಮ ವಹಿಸುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದೆ.

1. ಭೂ ಸ್ವಾಧೀನಾಧಿಕಾರಿಗಳು ಭೂಸ್ವಾಧೀನದ ಅಂತಿಮ ಅಧಿಸೂಚನೆಯಾದ ತಕ್ಷಣ ಅಧಿಸೂಚನೆಯ ಒಂದು ಪ್ರತಿಯನ್ನು ಸಂಬಂಧಪಟ್ಟ ತಹಸೀಲ್ದಾರರಿಗೆ ಜರೂರಾಗಿ ಕಳುಹಿಸುವುದು.
2. ಅಂತಿಮ ಅಧಿಸೂಚನೆಯ ಪ್ರತಿ ಸ್ವೀಕೃತಿಯಾದ ಕೂಡಲೆ ತಹಸೀಲ್ದಾರರು ಭೂಸ್ವಾಧೀನವಾಗಿರುವ ಜಮೀನಿನ ಮ್ಯುಟೇಷನ್ ಬದಲಾವಣೆ ಮಾಡಿಸಿ ಹಾಗೂ ಆರ್.ಟಿ.ಸಿ.ಯಲ್ಲಿ ಇಂದೀಕರಣ ಮಾಡಿಸಿ, ಆರ್.ಟಿ.ಸಿ ಯ ನಕಲನ್ನು ಭೂಸ್ವಾಧೀನಾಧಿಕಾರಿಗಳಿಗೆ ಜಾಗ್ರತೆ ಕಳುಹಿಸಿಕೊಡುವುದು.
3. ಭೂಸ್ವಾಧೀನಾಧಿಕಾರಿಗಳು ಅಂತಿಮ ಅಧಿಸೂಚನೆಯ ಒಂದು ಪ್ರತಿ, ಅವಾರ್ಡ್ ನಕಲು, ಆರ್.ಟಿ.ಸಿ ಮ್ಯುಟೇಷನ್ ಹಾಗೂ ಇತರೆ ಅಗತ್ಯ ದಾಖಲೆಗಳನ್ನೊಳಗೊಂಡ ಕಡತವನ್ನು ಸಂಬಂಧಪಟ್ಟ ಭೂ ಮಾಪನ ಇಲಾಖೆ ಸಹಾಯಕ ನಿರ್ದೇಶಕರಿಗೆ ಕಳುಹಿಸಿ ಪೋಡಿ ದುರಸ್ತಿ, ಕಾರ್ಯ ಪೂರೈಸುವಂತೆ ಕೋರುವುದು. (ಯಾವುದೇ ಸಂದರ್ಭದಲ್ಲಿ ಮೂಲ ಕಡತ ಕಳುಹಿಸಬಾರದು)
4. ಭೂ ಮಾಪನ ಇಲಾಖೆ, ಸಹಾಯಕ ನಿರ್ದೇಶಕರು ಕಡತ ಸ್ವೀಕೃತಿಯಾದ ಕೂಡಲೇ, ಅಗತ್ಯ ಕ್ರಮ ಕೈಗೊಂಡು ಪೋಡಿ ದುರಸ್ತಿ, ಕಾರ್ಯವನ್ನು ಜಾಗ್ರತೆ ಪೂರ್ಣಗೊಳಿಸುವುದು. ಈ ಕಾರ್ಯ ನಿರ್ವಹಣೆಗೆ ಬೇಕಾಗುವ ದಾಖಲೆಗಳ ಅವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ಭೂಸ್ವಾಧೀನಾಧಿಕಾರಿಗಳ ಕಛೇರಿಯಿಂದ [illegible] ಪಡೆಯುವುದು.
5. ಭೂಮಾಪನ ಇಲಾಖೆಯ ಸಹಾಯಕ ನಿರ್ದೇಶಕರು ದುರಸ್ತಿಯಾದ ಬಗ್ಗೆ ಸಂಬಂಧಪಟ್ಟ ತಹಸೀಲ್ದಾರರಿಗೆ ಸೂಕ್ತ ಮಾಹಿತಿಯನ್ನು ನೀಡಲು ಕ್ರಮ ವಹಿಸುವುದು.

ಸಹಿ/-
ವಿಭಾಗಾಧಿಕಾರಿ,
ಮೈಸೂರು ವಿಭಾಗ, ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿ ಮತ್ತು ಮುಂದಿನ ತ್ವರಿತ ಕ್ರಮಕ್ಕಾಗಿ ಕಳುಹಿಸಿದೆ:

1. ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳು
2. ಜಂಟಿ ನಿರ್ದೇಶಕರು, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಮೈಸೂರು ವಿಭಾಗ, ಮೈಸೂರು ಮತ್ತು ವಿಭಾಗದ ಎಲ್ಲಾ ಉಪನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರುಗಳು
3. ವಿಭಾಗದ ಎಲ್ಲಾ ಸಹಾಯಕ ಕಮೀಷನರುಗಳು
4. ವಿಭಾಗದ ಎಲ್ಲಾ ವಿಶೇಷ ಭೂಸ್ವಾಧೀನಾಧಿಕಾರಿಗಳು
5. ವಿಭಾಗದ ಎಲ್ಲಾ ತಹಸೀಲ್ದಾರರುಗಳು.

5 ... / 95-6

(signature) 25/11

ವಿಭಾಗಾಧಿಕಾರಿಗಳವರ ಪರವಾಗಿ,
ಮೈಸೂರು ವಿಭಾಗ.

ಗಂಗಾಧರ.